PUBLIC NOTICE

It is for general information that I, **Ekeshwari Patil D/o. Umeshgouda Patil,** R/o Halyal, VTC Halyal, Sub-District Hubli, District Dharwad, State Karnataka-580023, declare that name of mine has been wrongly written as **Ekeshwari** in my Educational Documents. The actual name of mine is **Ekeshwar Patil** which may be amended accordingly.

Henceforth, my correct & complete name shall be **Ekeshwar Patil** for all purposes.

Y.N. Shivalli, Advocate
Hubli, Betadur, Tq : Kundgol, Dist : Dharwad,
05-11-2026 M : 9483250415

ಸಾರ್ವಜನಿಕ ಎಚ್ಚರಿಕೆ ನೋಟೀಸು

ನಮ್ಮ ಪಕ್ಷಗಾರರಾದ **ಶ್ರೀ ಮಲಕಜಾನ ತಂದೆ ದಿ. ಬಾಬುಲಾಲ ತಹಶೀಲ್ದಾರ ಸಾ : ಗೌಸಿಯಾ ಬೌಸ, ಇಸ್ಲಾಂಪೂರ ಹಳೇ-ಹುಬ್ಬಳ್ಳಿ, ಹುಬ್ಬಳ್ಳಿ** ಇವರು ಕೊಟ್ಟ ಮಾಹಿತಿ ಪ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ಎಚ್ಚರಿಕೆ ನೋಟೀಸು ಏನೆಂದರೆ–

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಅಗ್ರಹಾರ ತಿಮ್ಮಸಾಗರ ಗ್ರಾಮದ ಜಮೀನುಗಳು **1)** ರಿ.ಸ. ನಂ.90 ಕ್ಷೇತ್ರ 04ಎ–00ಗುಂ 2) ಸರ್ವೆ ನಂ.92/ಅ ಪೈ 00ಎ–32ಗುಂ ಹಾಗೂ 3) ಸರ್ವೆ ನಂ.92/ಬಿ ಪೈ 00ಎ–16ಗುಂ ಯರಿ ಶೇತ್ಕಿ ಜಮೀನುಗಳನ್ನು ಇದರ ಮಾಲೀಕರಾದ **1) ಶ್ರೀ ಐಸನಗೌಡ ತಂದೆ ಗುರನಗೌಡ ಪಾಟೀಲ 2) ಶ್ರೀ ಯಲ್ಲಪ್ಪಗೌಡ ತಂದೆ ಗುರನಗೌಡ ಪಾಟೀಲ 3) ಅಶೋಕಗೌಡ ತಂದೆ ಗುರನಗೌಡ ಪಾಟೀಲ 4) ಮಹದೇವಗೌಡ ತಂದೆ ಸಂಗನಗೌಡ ಪಾಟೀಲ 5) ಶಂಕರಗೌಡ ತಂದೆ ಸಂಗನಗೌಡ ಪಾಟೀಲ 6) ಶ್ರೀ ಮಂಜುನಾಥಗೌಡ ತಂದೆ ಸಂಗನ ಗೌಡ ಪಾಟೀಲ ಸಾ : ವಾಣಿ ಪ್ಲಾ. ತಿಮ್ಮಸಾಗರ ರೋಡ, ನೇಕಾರನಗರ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ** ಇವರು ಸದರ ತಮ್ಮ ಮಾಲ್ಕಿ ಜಮೀನುಗಳನ್ನು ನಮ್ಮ ಪಕ್ಷಗಾರರಿಗೆ ಮಾರಾಟ ಮಾಡಲು ಒಪ್ಪಿ ಅವರ ಕಡೆಯಿಂದ ಈಗಾಗಲೆ **ಐದಿಲಿ ಸಂಚಕಾರ ರಕಂ ಅಂತಾ ರೂ. 13,50,000/-ಗಳನ್ನು ಪಡೆದುಕೊಂಡಿರುತ್ತಾರೆ** ಹಾಗೂ ಖರೀದಿ ಸಂಚಕಾರ ಪತ್ರವನ್ನು ನೋಂದ ಮಾಡಿಕೊಡಲು ಒಪ್ಪಿಕೊಂಡ ಕಾರಣ ನಮ್ಮ ಪಕ್ಷಗಾರರು ಸದರಿ ಜಮೀನುಗಳ ಮಾಲೀಕರಿಗೆ ಸಾಕಷ್ಟು ಬಾರಿ ಖರೀದಿ ಸಂಚಕಾರ ಪತ್ರವನ್ನು ನೋಂದಾಯಿಸಿಕೊಡಲು ಕರೆದರೂ ಇಂದು ನಾಳೆ ಅಂತಾ ದಿನಮೇಕ ಮಾಡುತ್ತಾ ಬೇರೆ ಬೇರೆ ವ್ಯಕ್ತಿಗಳ ಕಡೆ ಸದರ ಜಮೀನುಗಳನ್ನು ಮಾರಾಟಕ್ಕಾಗಿ ಹೊರಟಿದ್ದು ಕಂಡುಬಂದಿರುತ್ತದೆ. ಹಾಗಾಗಿ ಸದರಿ ಜಮೀನುಗಳ ಮಾಲೀಕರಿಂದ ಸದರಿ ಜಮೀನುಗಳನ್ನು ಯಾರಾದರೂ ಖರೀದಿಸಲು ಮುಂದಾದಲ್ಲಿ ಅದಕ್ಕೆ ಆ ಸದರಿ ಖರೀದಿದಾರರು ಲಕ್ಷಾನಕ್ಕೆ ಒಳಗಾಗುತ್ತಾರೆ. ಅಂತಾ ಕೊಟ್ಟ ಸಾರ್ವಜನಿಕ ಎಚ್ಚರಿಕೆ ನೋಟೀಸು.

ಜಿ. ಎಚ್. ವಗ್ಗರ, ವಕೀಲರು,
ಹುಬ್ಬಳ್ಳಿ. ಸಾ: ಕಲುಬುರ್ಗಿಮಠ ಜಾಲ, ಮಂಟೂರ ರಸ್ತೆ,
06–11–2026 ಹುಬ್ಬಳ್ಳಿ. ಜಿ: ಧಾರವಾಡ ಮೊ : 8095869740

ಇಂದು ಪ್ರಜಾಸೇವೆ ಆಂದೋಲನ

ಹುಬ್ಬಳ್ಳಿ: ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಥಳದಲ್ಲಿಯೇ ತಕ್ಷಣ ಪರಿಹಾರ ಒದಗಿಸಲು ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ವತಿಯಿಂದ ಹೋಬಳಿ ಮಟ್ಟದ ಬೃಹತ್ ಪ್ರಜಾ ಸೇವಾ ಆಂದೋಲನ ಸಭೆ ಶಾಸಕರ ಅಧ್ಯಕ್ಷತೆಯಲ್ಲಿ ನ.7 ರಂದು ಬೆಳಿಗ್ಗೆ 10.30ಕ್ಕೆ ತಾಲೂಕು ಆಡಳಿತ ಸೌಧದ ತಹಶೀಲ್ದಾರ ಕಾರ್ಯಾಲಯದ ಸಭಾಭವನದಲ್ಲಿ ಆಯೋಜಿಸಲಾಗಿದೆ ಎಂದು ಹುಬ್ಬಳ್ಳಿ ಶಹರ ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ನೋಟೀಸು

ನನ್ನ ಕಕ್ಷಿದಾರರು ಕೊಟ್ಟ ಅಧಿಕಾರ ವ ಮಾಹಿತಿಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೆನೆಂದರೆ,

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಸರ್ವೆ–ರಜಿಸ್ಟ್ರಾರ ಹದ್ದಿಯ ಹೈಕ ಹುಬ್ಬಳ್ಳಿ ಶಹರದ ಗೋಪನಕೊಪ್ಪ ಗ್ರಾಮದಲ್ಲಿರುವ ಬಿಸ್ ಶೆತ್ಕಿ ಖಿಲ್ಲಾ ಜಾಗಾ ಇರುವ ಆಸ್ತಿ ಇದರ ರಿ.ಸ. ನಂ.149/1, **ಪ್ಲಾಟ ನಂ.61** ಕ್ಷೇತ್ರ 1162 ಸ್ಕ್ವೇರ ಫೂಟ ಇರುವ ಆಸ್ತಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿರುವ ಮಾಲೀಕರಾದ **ಶ್ರೀ ಜಗದೀಶ ತಂದೆ ಪಾಂಡುರಂಗಸಾ ಮಗಜಕೊಂಡಿ, ಸಾ॥ ಹುಬ್ಬಳ್ಳಿ** ಇವರ ಕಡೆಯಿಂದ ಖರೀದಿಸುವ ಸಲುವಾಗಿ ಮಾತುಕತೆ ಯಾಗಿದ್ದು, ಶೀಘ್ರದಲ್ಲಿ ಖರೀದಿ ಪತ್ರವನ್ನು ನೋಂದ ಮಾಡಿಕೊಳ್ಳುವವರು ಇರುತ್ತಾರೆ.

ಆದ ಕಾರಣ ಮೇಲೆ ವಿವರಿಸಿದಂತಹ ಆಸ್ತಿಯ ಖರೀದಿ ಕುರಿತು ಯಾವುದೇ ವ್ಯಕ್ತಿ ವ ಬ್ಯಾಂಕ, ಸಂಘ, ಸಂಸ್ಥೆಗಳ ಯಾವುದೇ ರೀತಿಯ ತಂಟೆ, ತಕರಾರುಗಳು, ಅಲ್ಪವಧಿ ಹಿತಾಸಕ್ತಿ, ಭೋಜಾ, ಟಾಜು, ಸರ್ಕಾರಿ, ಸಹಕಾರಿ ವ ಸಾಮುಕಾರಿ ಲೇಣಿ, ದೇಣಿಗೆಳಿದ್ದಲ್ಲಿ ಅವುಗಳನ್ನು ಈ ನೋಟೀಸು ಪ್ರಕಟಿಸಿದ 07 (ಏಳು) ದಿನದೊಳಗಾಗಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಲೇಖಿ ಮುಖಾಂತರ ಸೂಕ್ತ ಕಾಗದ ಪತ್ರ ಹುರಾವೆಗಳೊಂದಿಗೆ ತಿಳಿಸತಕ್ಕದ್ದು. ಇಲ್ಲವಾದಲ್ಲಿ ನನ್ನ ಕಕ್ಷಿದಾರರು ಮೇಲೆ ಹೇಳಿದ ಆಸ್ತಿಯ ಮಾಲೀಕರಿಂದ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಖರೀದಿ ಪತ್ರ ನೋಂದಾಯಿಸಿಕೊಳ್ಳುತ್ತಾರೆ. ಅವಧಿ ಮೀರಿ ಬಂದ ತಕರಾರು ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅವುಗಳು ನನ್ನ ಕಕ್ಷಿದಾರರಿಗೆ ಬಂಧನಕಾರಕವಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಎ. ಆರ್. ಅಥಣಿ, ವಕೀಲರು
ಹುಬ್ಬಳ್ಳಿ. 06–11–2026 ಮನೆ ನಂ.277, ಆರವಿಂದನಗರ, ಹುಬ್ಬಳ್ಳಿ–580024 ಮೊ : 9886523156.

ಜೆ & ಡಬ್ಲ್ಯೂ ನಂ. 197/2026

ಮಾನ್ಯ 1ನೇ ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : **1) ಕು. ಕೃತಿಕಾ ತಂದೆ ಪ್ರಕಾಶ ನೂಲ್ವಿ ಮತ್ತು ಇತರರು**

ಎದುರುಗಾರರು : ಯಾರೂ ಇಲ್ಲಾ

ವಿರುದ್ಧ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ನೋಟಿಸು

ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ತಿಳಿಸುವದೇನೆಂದರೆ, ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಕುಸುಗಲ್ ಗ್ರಾಮದಲ್ಲಿರುವ ಶೆತ್ಕಿ ಜಮೀನು ಇದರ ಬ್ಲಾಕ ನಂ.1060/6 ಕ್ಷೇತ್ರ 0–ಎಕರೆ 5–ಗುಂಟೆ 8–ಆಣೆ ಆಕಾರ ರೂ.0–72 ಪೈ. ನೇ ಜಮೀನು ಅರ್ಜಿದಾರ ನಂ.3 ಹಾಗೂ ಆತನ ಸಹೋದರ ಮತ್ತು ಸಹೋದರಿಯ ಹೆಸರಿನಲ್ಲಿ ಜಂಟಿಯಾಗಿರುತ್ತದೆ. ಅರ್ಜಿದಾರ ನಂ.1 ಮತ್ತು 2 ನೇದ್ದವರು ಅಲ್ಪವಯ ಇರುವದರಿಂದ ಅವರ ಸಂರಕ್ಷಣೆಯನ್ನು 3ನೇ ಅರ್ಜಿದಾರನು ತಂದೆಯೆ ಮಾಡುತ್ತಿದ್ದು, ಮೇಲ್ಕಂಡ ಆಸ್ತಿಯನ್ನು ಅರ್ಜಿದಾರರು ಮಾರಾಟ ಮಾಡುತ್ತಿದ್ದು, ಅಲ್ಪವಯ ಅರ್ಜಿದಾರ ನಂ.1 ಮತ್ತು 2 ನೇದ್ದವರ ಕುರಿತು ಮಾನ್ಯ ನ್ಯಾಯಾಲಯದಿಂದ ಮಾರಾಟ ಮಾಡುವ ಪರವಾನಿಗೆ ಕುರಿತು ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿದ್ದು, ಈ ಕುರಿತು ಯಾರದಾದರು ತಂಟೆ ವ ತಕರಾರು ಹಕ್ಕು ಹಿತಾಸಕ್ತಿ ವಗೈರೆ ಇದ್ದಲ್ಲಿ ದಿನಾಂಕ: **30–11–2026** ರ ಮುಂಜಾನೆ 10–45 ಗಂಟೆಗೆ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೇ ವಕೀಲರ ಮೂಲಕ ಹಾಜರ ಆಗಿ ತಮ್ಮದೇನಾದರು ತಂಟೆ ವ ತಕರಾರು ಇದ್ದರೆ ಸಲ್ಲಿಸಬೇಕು. ತಪ್ಪಿದಲ್ಲಿ ಸದರ ಪ್ರಕರಣವನ್ನು ಏಕತರ್ಫಿಯಾಗಿ ನಿಕಾಲಿ ಮಾಡಲಾಗುವದು ತಿಳಿಯಿರಿ.

ಇಂದು ದಿ: **02–11–2026** ರಂದು ನಮ್ಮ ಸಹಿ ಮಾಡಿ ನ್ಯಾಯಾಲಯದ ಮೊಹರ ಹಾಕಿ ಕೊಡಲ್ಪಟ್ಟಿದೆ.

ಹುಬ್ಬಳ್ಳಿ 30–10–2026 ನ್ಯಾಯಾಲಯದ ಆಜ್ಞೆಯ ಮೇರೆಗೆ
ವಿ.ಪಿ.ಶಿರಗುಪ್ಪಿ ಕೋರ್ಟ ಮೊಹರು ಸಹಿ/– ಶಿರಸ್ತೇದಾರರು
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಬಸವರಾಜ ರಾಮಪ್ಪ ಹೊಸೂರ, ಸಾ॥ ಎಮ್.ಐ.ಜಿ–**01**, ಬಿ/**10**, ಚೈತನ್ಯನಗರ, ಕೆಲಗೇರಿ ರೋಡ, ಧಾರವಾಡ ನಿವಾಸಿಯಾಗಿದ್ದು, ಇವರು ದಿ: **18/10/2001** ರಂದು ಕರ್ನಾಟಕ ಗೃಹ ಮಂಡಳಿ, ಹುಬ್ಬಳ್ಳಿ ಇವರಿಂದ ಖರೀದಿ ಮಾಡಿದ ಮನೆ ನಂ.10/ಬಿ, ಎಮ್.ಐ.ಜಿ–I ರ ಮೂಲ ಖರೀದಿ ಪತ್ರ ಹಾಗೂ ಅದಕ್ಕೆ ಸಂಬಂಧ ಪಟ್ಟ ಕಾಗದ ಪತ್ರಗಳು ಕಾಣೆಯಾಗಿರುತ್ತವೆ.

ಒಂದು ವೇಳೆ ಅದು ಯಾರಿಗಾದರೂ ಸಿಕ್ಕಲ್ಲಿ ಈ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಬೇಕೆಂದು ವಿನಂತಿ ಮತ್ತು ಅದರ ಸಲುವಾಗಿ ಕೊಟ್ಟ ಸಾರ್ವಜನಿಕ ಪ್ರಕಟಣೆ.

ಧಾರವಾಡ, **ಎಮ್.ಜಿ.ಬೆಂತೂರ,** ವಕೀಲರು,
06/11/2026 ಧಾರವಾಡ. 9481930405

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ.: HE-TRD-2025-26-OT-30-2 ದಿನಾಂಕ: 01.11.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನಿಡವಂದ (ಎನ್‌ವಿಡಿ) ನಿಲ್ದಾಣದಲ್ಲಿ 1 ಹೆಚ್ಚುವರಿ ಲೂಪ್ ಲೈನ್ (5ನೇ ಲೈನ್) ನ ವ್ಯವಸ್ಥೆ.	ರೂ. 1,25,94,043.40

ಟೆಂಡರು ಸೂಚನೆ ಸಂ.: HE-TRD-2026-27-OT-1 ದಿನಾಂಕ: 01.11.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹೆಬಸೂರದಲ್ಲಿ 1 ಹೆಚ್ಚುವರಿ ಲೂಪ್ ಲೈನಿನ ವ್ಯವಸ್ಥೆಗಾಗಿ ಓಹೆಚ್‌ಇ ಮಾರ್ಪಾಡು ಕಾಮಗಾರಿ.	ರೂ. 2,01,22,779.30

ಮೇಲಿನ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **25.11.2026, 15:00** ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಿದ್ಯುತ್ ಅಭಿಯಂತರರು/ ಟಿಆರ್‌ಡಿ/ಹುಬ್ಬಳ್ಳಿ

PUB/593/AAD/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಆಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಗ್ರಾಹಕರ ಸುರಕ್ಷತೆಯೇ ಹೆಸ್ಕಾಂನ ಧ್ಯೇಯ। ನಗರದಲ್ಲಿ ದುರಸ್ತಿ ಹಾಗೂ ನಿರ್ವಹಣೆಗೆ ವಿಶೇಷ ಅಭಿಯಾನ

ಉತ್ತಮ ವಿದ್ಯುತ್ ಸೇವೆಗೆ ಹೆಸ್ಕಾಂನ ಹೊಸ ಸಂಕಲ್ಪ

ಸಂ.ಕ.ಸಮಾಚಾರ ಹುಬ್ಬಳ್ಳಿ: ಗ್ರಾಹಕರಿಗೆ ಸುರಕ್ಷಿತ, ಗುಣಮಟ್ಟದ ಹಾಗೂ ವಿಶ್ವಾಸಾರ್ಹ ವಿದ್ಯುತ್ ಪೂರೈಕೆ ಒದಗಿಸುವ ನಿಟ್ಟಿನಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ಹೊಸ ಸವಾಲನ್ನು ಸ್ವೀಕರಿಸಿದ್ದು, ವಿದ್ಯುತ್ ವಿತರಣಾ ಜಾಲದ ಸಮಗ್ರ ಸುಧಾರಣೆಗಾಗಿ ದುರಸ್ತಿ ಹಾಗೂ ನಿರ್ವಹಣೆಗಾಗಿ ವಿಶೇಷ ಅಭಿಯಾನ ಕೈಗೆತ್ತಿಕೊಂಡಿದೆ.

ವಿದ್ಯುತ್ ಪೂರೈಕೆಯಲ್ಲಿ ಉಂಟಾಗುವ ಅನಿರೀಕ್ಷಿತ ಅಡಚಣೆಗಳನ್ನು ತಗ್ಗಿಸುವುದು, ವಿದ್ಯುತ್ ಜಾಲದ ಸುರಕ್ಷತೆಯನ್ನು ಹೆಚ್ಚಿಸುವುದು ಹಾಗೂ ಗ್ರಾಹಕರಿಗೆ ಇನ್ನಷ್ಟು ಉತ್ತಮ ಸೇವೆ ಒದಗಿಸುವುದು ಈ ವಿಶೇಷ ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ನವೆಂಬರ್‌ನಲ್ಲಿ 29 ಫೀಡರ್‌ಗಳ ನಿರ್ವಹಣೆ:

ಹುಬ್ಬಳ್ಳಿ ನಗರದ ವಿವಿಧ ಪ್ರದೇಶಗಳಲ್ಲಿ ಒಟ್ಟು 29 ವಿದ್ಯುತ್ ಫೀಡರ್‌ಗಳ ಸಮಗ್ರ ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೂಲಕ ಹೆಸ್ಕಾಂ ತನ್ನ ಕಾರ್ಯದಕ್ಷತೆ ಹಾಗೂ ಸೇವಾ ಬದ್ಧತೆ ಸಾಬೀತುಪಡಿಸಲು ಮುಂದಾಗಿದೆ. ಹುಬ್ಬಳ್ಳಿಯ ವಿಶ್ವೇಶ್ವರಯ್ಯ ನಗರ, ಸಿದ್ಧಾರೂಢ ಮಠದ ಸುತ್ತಮುತ್ತಲಿನ ಪ್ರದೇಶಗಳು, ನವನಗರ, ತಾರಿಹಾಳ, ಉಣಕಲ್ ನಗರ ಹಾಗೂ ವಿದ್ಯುತ್ ನಗರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸುಮಾರು 29 ಫೀಡರ್‌ಗಳ ಆಯ್ಕೆ ಮಾಡಿ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಅಭಿಯಾನವು ಕೇವಲ ಸಾಮಾನ್ಯ ದುರಸ್ತಿ ಕಾರ್ಯಕ್ಕೆ ಸೀಮಿತವಾಗದೆ, ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿನ ಸಂಭಾವ್ಯ ದೋಷಗಳನ್ನು ಮುಂಚಿತವಾಗಿಯೇ ಗುರುತಿಸಿ ಸರಿಪಡಿಸಲಾಗುತ್ತಿದೆ. ಅಭಿಯಾನದ ಅಂಗವಾಗಿ ಟ್ರಾನ್ಸ್‌ಫಾರ್ಮರ್‌ಗಳ (ಟಿ.ಸಿ) ಸುಸ್ಥಿತಿ ಪರಿಶೀಲನೆ, ವಿದ್ಯುತ್ ಕಂಬಗಳ ಬಲವರ್ಧನೆ, ಸಡಿಲಗೊಂಡ ವಿದ್ಯುತ್ ತಂತಿಗಳ ದುರಸ್ತಿ, ವಿದ್ಯುತ್ ಮಾರ್ಗಗಳಿಗೆ ಅಡ್ಡಿಯಾಗುವ ಗಿಡ–ಮರಗಳ ಕೊಂಬೆಗಳ ತೆರವು, ಹಾಳಾದ ವಿದ್ಯುತ್ ಪರಿಕರಗಳ ಬದಲಾವಣೆ ಹಾಗೂ ವಿದ್ಯುತ್ ಮಾರ್ಗಗಳ ಸಮಗ್ರ ತಪಾಸಣೆಯಂತಹ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಲದೇ, ಎಲ್‌ಟಿ ಮತ್ತು ಎಚ್‌ಟಿ ವಿದ್ಯುತ್ ಮಾರ್ಗಗಳು, ಜಂಪ್‌ಗಳು, ಇನ್ಸುಲೇಟರ್‌ಗಳು ಹಾಗೂ ಇತರ ಪ್ರಮುಖ ವಿದ್ಯುತ್ ಉಪಕರಣಗಳ ತಪಾಸಣೆ ಮತ್ತು ಅಗತ್ಯ ನಿರ್ವಹಣೆಗೆ ವಿಶೇಷ ಆದ್ಯತೆ ನೀಡಲಾಗಿದೆ.

ಸಮಸ್ಯೆ ಬರುವ ಮುನ್ನವೇ ಪರಿಹಾರ: ಹೆಸ್ಕಾಂನ ಹೊಸ ಕಾರ್ಯತಂತ್ರ:

ವಿದ್ಯುತ್ ಅಡಚಣೆ ಉಂಟಾದ ನಂತರ ದುರಸ್ತಿ ಮಾಡುವ ಬದಲು ಸಂಭಾವ್ಯ ತಾಂತ್ರಿಕ ಸಮಸ್ಯೆಗಳನ್ನು ಮುಂಚಿತವಾಗಿಯೇ ಗುರುತಿಸಿ ನಿವಾರಿಸುವ ಮುಂಜಾಗ್ರತಾ ನಿರ್ವಹಣಾ ವ್ಯವಸ್ಥೆಗೆ ಹೆಸ್ಕಾಂ ಹೆಚ್ಚಿನ ಒತ್ತು ನೀಡುತ್ತಿದೆ. ಈ ಉಪಕ್ರಮದಿಂದ ಅನಿರೀಕ್ಷಿತ ವಿದ್ಯುತ್ ವ್ಯತ್ಯಯಗಳನ್ನು ಕಡಿಮೆ ಮಾಡುವುದು, ವಿದ್ಯುತ್ ಜಾಲದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು, ತಾಂತ್ರಿಕ ದೋಷಗಳನ್ನು ನಿಯಂತ್ರಿಸುವುದು ಹಾಗೂ ಗ್ರಾಹಕರಿಗೆ ಹೆಚ್ಚು ವಿಶ್ವಾಸಾರ್ಹ ವಿದ್ಯುತ್ ಸೇವೆ ಒದಗಿಸುವ ಗುರಿ ಹೊಂದಲಾಗಿದೆ.

ಗ್ರಾಹಕರ ಸಹಕಾರವೇ ಹೆಸ್ಕಾಂನ ಶಕ್ತಿ

ವಿದ್ಯುತ್ ಜಾಲದ ಸಮಗ್ರ ನಿರ್ವಹಣೆಗಾಗಿ ಕೆಲಕಾಲ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದಾದರೂ, ದೀರ್ಘಾವಧಿಯಲ್ಲಿ ಉತ್ತಮ ವಿದ್ಯುತ್ ಸೇವೆ ಒದಗಿಸುವ ಉದ್ದೇಶದಿಂದ ಈ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮಹತ್ವದ ಅಭಿಯಾನಕ್ಕೆ ಸಾರ್ವಜನಿಕರು ಸಹಕಾರ ನೀಡುವಂತೆ ಹೆಸ್ಕಾಂ ಮನವಿ ಮಾಡಿದ್ದು, ಗ್ರಾಹಕರ ಸುರಕ್ಷತೆ ಹಾಗೂ ಗುಣಮಟ್ಟದ ವಿದ್ಯುತ್ ಸೇವೆಯೇ ಸಂಸ್ಥೆಯ ಪ್ರಥಮ ಆದ್ಯತೆಯಾಗಿದೆ ಎಂದು ತಿಳಿಸಿದೆ.

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರು ಕೊಟ್ಟ ಅಧಿಕಾರ ವ ಮಾಹಿತಿ ಮೇರೆಗೆ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕು ಸಃ ರಃ ಹದ್ದಿಯ ಹೈಕ ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಹದ್ದಿಯಲ್ಲಿರುವ ಹುಬ್ಬಳ್ಳಿ ಶಹರ ಅಮರಗೋಳ ಗ್ರಾಮದಲ್ಲಿರುವ ವಾಸದ ಪ್ಲಾಟು, ಇದರ ಸರ್ವೆ ನಂಬರ : **682/1** ಹಾಗೂ **683/1, 2, 3, 4, 5, 6** ಮತ್ತು **7**, ಇವುಗಳಲ್ಲಿಯ ಪ್ಲಾಟ ನಂಬರ **12**, ಕ್ಷೇತ್ರ : **108** ಚ. ಮೀ. ಮತ್ತು ಇ–ಸ್ವತ್ತಿನ ಸಂಖ್ಯೆ : **22-8-655-12ಬಿ** ಅದೆ. ಈ ರೀತಿ ಇರುವ ವಾಸದ ಪ್ಲಾಟನ್ನು ನಮ್ಮ ಪಕ್ಷಗಾರರಾದ ಶ್ರೀ ರಂಗರಾವ್ ತಂದೆ ಕೃಷ್ಣರಾವ್ ಬಿಜ್ಜೂರ, ಸಾಕೀನ : ಬೆಂಗಳೂರು ಇವರು ಶ್ರೀ ಸಂದೀಪ ತಂದೆ ಬಸಪ್ಪ ಸಾಲವಾಡಗಿ, ಸಾಕೀನ : ಬಿಜಾಪುರ, ಎಂಬುವರಿಂದ ಖರೀದಿಸುವವರು ಇದ್ದಾರೆ. ಮತ್ತು ಖರೀದಿ ಕರಾರು ಪತ್ರ ವ ಖರೀದಿ ಪತ್ರವನ್ನು ನೋಂದಾಯಿಸಿ ಕೊಳ್ಳುವವರು ಇರುತ್ತಾರೆ. ಆದ್ದರಿಂದ ಸದರಿ ಖರೀದಿ ವ್ಯವಹಾರದ ಬಗ್ಗೆ ಯಾರಿಂದಾದರೂ ತಂಟೆ, ತಕರಾರು, ಭೋಜಾ, ವತ್ತಿ ವಗೈರೆ ಅಥವಾ ಇನ್ನಾವುದೇ ರೀತಿಯಲ್ಲಿ ತಂಟೆ, ತಕರಾರು ವಗೈರೆ ಇದ್ದಲ್ಲಿ, ಈ ನೋಟೀಸ್ ಪ್ರಕಟಿಸಿದ **07** ದಿನಗಳಲ್ಲಿ ತಮ್ಮ ಯಾವತ್ತೂ ತಕರಾರುಗಳನ್ನು ಲೇಖಿ ಮುಖಾಂತರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ. ಮತ್ತು ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳಲಾಗುವುದು. ನಂತರ ಬಂದ ತಕರಾರುಗಳು ನಮ್ಮ ಪಕ್ಷಗಾರರ ನೋಂದ ಖರೀದಿ ವ್ಯವಹಾರಕ್ಕೆ ಮತ್ತು ಹಕ್ಕಿಗೆ ಬಾಂಧಾಯಿಸುವುದಿಲ್ಲ, ಅಂತ ಕೊಟ್ಟ ಸ